

ವಯಸ್ಸಿನ ಮಕ್ಕಳಿಗೆ ಶಿಕ್ಷಣ ಪಡೆಯುವ ಅವಕಾಶ ಕಲ್ಪಿಸುವುದು.

ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಗೊಳಿಸುವ ಉದ್ದೇಶದ ಸಂವಿಧಾನ ನ್ಯಾಯಪರತೆ, ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವದ ಆಶಯಗಳನ್ನು ಒಳಗೊಂಡಿದೆ. ಈ ಆಶಯಗಳು ಸಾಕಾರಗೊಳ್ಳುವ ನಿಟ್ಟಿನಲ್ಲಿ, ಎಲ್ಲ ನಾಗರಿಕರು ಸಂವಿಧಾನ ಹೇಳುವ ಮೂಲಭೂತ ಕರ್ತವ್ಯಗಳನ್ನು ಪಾಲಿಸುವುದು ಅಗತ್ಯವಾಗಿದೆ.

## ಆತಂಕಕಾರಿ ಅಡ್ಡದಾರಿಗಳು

ಜನಸಾಮಾನ್ಯರಿಗೆ ಭರವಸೆಯ ರೂಪದಲ್ಲಿ, ಮೌಲ್ಯದ ರೂಪದಲ್ಲಿ, ಸಾಮಾಜಿಕ ನ್ಯಾಯ ಹಾಗೂ ಸಮಾನತೆಯ ಸಾಕಾರಶಕ್ತಿಯ ರೂಪದಲ್ಲಿ ಸಂವಿಧಾನವನ್ನು ನೋಡುವ ಸಂದರ್ಭದಲ್ಲಿಯೇ, ಇದೇ ಸಂವಿಧಾನದ ನೆರಳಿನಲ್ಲಿಯೇ ಸಮಾಜದಲ್ಲಿ ಕ್ಷೋಭೆ, ಅಸಹನೆ ಬಿತ್ತುತ್ತಿರುವ ವರ್ಗವೊಂದು ಸಕ್ರಿಯವಾಗಿರುವುದನ್ನು ಗಮನಿಸಬಹುದು. ಈ ಘಟನೆಗಳು ನಮ್ಮ ಸಂವಿಧಾನದ ಬೆನ್ನುಮೂಳೆ ಗಟ್ಟಿಯಾಗಿಲ್ಲವೇ ಎನ್ನುವ ಅನುಮಾನ ಮೂಡಲು ಕಾರಣವಾಗಿವೆ. ಇಲ್ಲೊಂದು ಸೂಕ್ಷ್ಮವನ್ನು ಗಮನಿಸಬೇಕು. ನಮ್ಮ ಸಾಂವಿಧಾನಿಕ ವ್ಯವಸ್ಥೆಯಲ್ಲಿ ಅಧಿಕಾರದ ಸೂತ್ರಗಳನ್ನು ಹಿಡಿದವರು, ಜನವಿರೋಧಿ ನೀತಿಗಳನ್ನು ಅನುಸರಿಸಿರುವ ಉದಾಹರಣೆಗಳನ್ನು ಕಂಡಿದ್ದೇವೆ, ಅದರ ಫಲವನ್ನು ಅನುಭವಿಸುತ್ತಿದ್ದೇವೆ. ಆದರೆ, ಅಂತಿಮವಾಗಿ ಈ ಜನವಿರೋಧಿ ಶಕ್ತಿಗಳನ್ನು ನಿಯಂತ್ರಿಸುವ, ನಿರಾಕರಿಸುವ ಸಾಧ್ಯತೆಯನ್ನೂ ಸಂವಿಧಾನ ಕಲ್ಪಿಸಿದೆ.

ಚುನಾವಣೆ ಹಾಗೂ ಮತದಾನದ ಹಕ್ಕು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ ಔಪಚಾರಿಕ ಪ್ರಕ್ರಿಯೆಯಷ್ಟೇ ಅಲ್ಲ; ವ್ಯವಸ್ಥೆಯಲ್ಲಿ ನೈತಿಕ ಮೌಲ್ಯಗಳನ್ನು ಸ್ಥಾಪಿಸಲು ಜನಸಾಮಾನ್ಯರಿಗೆ ಸಂವಿಧಾನ ಕಲ್ಪಿಸಿರುವ ಅಪೂರ್ವ ಅವಕಾಶವದು; 'ಮತ' ಎನ್ನುವುದು 'ಮೌಲ್ಯ'ವೂ ಆಗಿರುವ ವಿಶೇಷ ವಿದ್ಯಮಾನವದು. ಈ ಅವಕಾಶವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಹೊಣೆಗಾರಿಕೆ ನಾಗರಿಕರದೇ ಆಗಿದೆ.

ಸಂವಿಧಾನ ಜಾರಿಗೆ ಬಂದು ಎಪ್ಪತ್ತೈದು ವರ್ಷಗಳ ನಂತರವೂ ಸಾಮಾಜಿಕ ತಾರತಮ್ಯ, ಅಸ್ಪೃಶ್ಯತೆ, ಆರ್ಥಿಕ ಅಸಮಾನತೆ, ಲಿಂಗ ತಾರತಮ್ಯ ಸೇರಿದಂತೆ ಹಲವು ಜಾಡ್ಯಗಳು ದೇಶವನ್ನು ಗಾಸಿಗೊಳಿಸುತ್ತಿವೆ. ಇದರರ್ಥ, ನಮ್ಮ ಸಂವಿಧಾನ ದುರ್ಬಲವಾಗಿದೆ ಎಂದಲ್ಲ; ಸಂವಿಧಾನವನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವಲ್ಲಿ ನಾವು ಸಂಪೂರ್ಣವಾಗಿ ಯಶಸ್ವಿಯಾಗಿಲ್ಲ ಎಂದರ್ಥ. ಸದ್ಯದ ಬಿಕ್ಕಟ್ಟುಗಳನ್ನು ಒಪ್ಪಿಕೊಳ್ಳುತ್ತಲೇ, ಸಂವಿಧಾನ ಇಲ್ಲದೆ ಹೋಗಿದ್ದರೆ ಈ ದೇಶ ಈಗಿನ ಸ್ಥಿತಿಯಲ್ಲಿ ಉಳಿಯುತ್ತಿತ್ತೇ ಎನ್ನುವ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕು.

ಸಂವಿಧಾನ ಅನುಷ್ಠಾನಕ್ಕೆ ಬಂದು ಜನವರಿ 26ಕ್ಕೆ ಎಪ್ಪತ್ತೈದು ವರ್ಷಗಳು! ಇದು ಭಾರತೀಯರು ಸಂಭ್ರಮಿಸಬೇಕಾದ ಸಂದರ್ಭ. ಯಾವುದೇ ಸಂಭ್ರಮಕ್ಕೆ ವಿವೇಕ ಜೊತೆಯಾದಾಗಷ್ಟೇ ಅದು ಅರ್ಥಪೂರ್ಣವಾಗಬಲ್ಲದು. ಸದ್ಯದ ಸಂಭ್ರಮ, 'ನಮ್ಮ ಸಂವಿಧಾನ'ವನ್ನು ಮತ್ತಷ್ಟು ಎದೆಗಿಳಿಸಿಕೊಳ್ಳುವ ಸಂದರ್ಭವಾಗಿ ಬದಲಾಗಬೇಕು. ಸಂವಿಧಾನ ನಿತ್ಯಪಠಣದ ಪಠ್ಯವಾಗಿ, ನಿತ್ಯ ಅನುಸರಣೆಯ ಕೃತಿಯಾಗಿ ಒದಗಿ ಬರಬೇಕು.

'ಸಂವಿಧಾನದಲ್ಲಿ ಯಾವುದೇ ಹಸ್ತಕ್ಷೇಪ ಮಾಡುವುದರ ಬದಲು ಅದನ್ನು ಕಾಪಾಡಿಕೊಳ್ಳಬೇಕು. ಏಕೆಂದರೆ, ಅದು ನಮ್ಮ ಸ್ವಾತಂತ್ರ್ಯದ ಏಕೈಕ ರಕ್ಷಣೆಯಾಗಿದೆ' ಎನ್ನುವುದು ಅಮೆರಿಕದ ಹದಿನಾರನೇ ಅಧ್ಯಕ್ಷ ಹಾಗೂ ಬಹು ದೊಡ್ಡ ಪ್ರಜಾಪ್ರಭುತ್ವವಾದಿಯಾಗಿದ್ದ ಅಬ್ರಹಾಂ ಲಿಂಕನ್ ಅವರ ಮಾತು. ಈ ಮಾತು ನಮಗೂ ತಥ್ಯವಾಗಿ ಪರಿಣಮಿಸಬೇಕು. ಧರ್ಮವನ್ನು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ ಎನ್ನುವ ಮಾತು ಸದ್ಯದ ಸಂದರ್ಭದಲ್ಲಿ 'ಸಂವಿಧಾನವನ್ನು ಉಳಿಸಿದರೆ ಅದು ನಮ್ಮನ್ನು ಉಳಿಸುತ್ತದೆ' ಎಂದು ಬದಲಾಗುತ್ತದೆ. ಧರ್ಮದ ಉಳಿವು, ನಿರ್ದಿಷ್ಟ ಧರ್ಮೀಯರ ಉಳಿವಷ್ಟೇ. ಸಂವಿಧಾನದ ಉಳಿವು ಸಮಸ್ತ ದೇಶವಾಸಿಗಳ ಉಳಿವು ಮತ್ತು ಉನ್ನತಿ.

'ಜೈ ಸಂವಿಧಾನ್' ಎನ್ನುವ ಘೋಷವಾಕ್ಯದಲ್ಲಿ ಭಾರತದ ಇಂದು ಮತ್ತು ನಾಳೆಗಳ ಭವಿಷ್ಯವಿದೆ.

ಪ್ರತಿಕ್ರಿಯಿಸಿ: feedback@sudha.co.in

## ಸ್ವತಂತ್ರ ಚಿಂತನೆಗಳ ಅಂತರ್ಜಲ




**-ಜಯತೀರ್ಥ**, ಸಿನಿಮಾ ನಿರ್ದೇಶಕ, ರಂಗಕರ್ಮಿ

ಸಂವಿಧಾನ, ಒಂದು ರೀತಿ ದೇವರನ್ನು ನಂಬಿ ನಾವು ಹೇಗೆ ಭಾವನಾತ್ಮಕವಾಗಿ ಆಸರೆ ಪಡೆದುಕೊಳ್ಳುತ್ತೇವೋ ಹಾಗೆ. ಇದು ಒಂದು ರೀತಿ ದೈಹಿಕ ಆಸರೆ. ಅಂದರೆ, 'ಕಣ್ಣಿಗೆ ಕಾಣುವಂಥ ದೇವರು'. 'ಯಾವುದೋ ಬಗೆಯಲ್ಲಿ ಎಲ್ಲರಿಗೂ ಅನ್ನ ಕೊಟ್ಟ ಕರುಣೆಯ ಮೂಲ ಮರೆತಿಹುದು ತನ್ನ' ಎಂಬ ಕವಿವಾಣಿಯಂತೆ ಸಂವಿಧಾನವನ್ನು ಬಣ್ಣಿಸಬಹುದು. ಪ್ರತಿಯೊಬ್ಬರಿಗೂ ಅನ್ನ ಸಿಗುವ ಹಾಗೆ, ಆರೋಗ್ಯ ಸಿಗುವ ಹಾಗೆ, ಶಿಕ್ಷಣ ಸಿಗುವ ಹಾಗೆ ಒಂದು ಬಲ ಸೃಷ್ಟಿಸುತ್ತದೆ ಸಂವಿಧಾನ. ಇದರ ಫಲಾನುಭವಿ ನಾನೂ ಕೂಡ.

ಈ ಪ್ರಜಾಪ್ರಭುತ್ವದಲ್ಲಿ ವಿದ್ಯೆ, ಆರೋಗ್ಯ, ಆಹಾರ, ವಸತಿ ಎಲ್ಲವೂ ಮೂಲಭೂತವಾಗಿ, ನನ್ನ ತಂದೆ ತಾಯಿಯ ಬುದ್ಧಿವಂತಿಕೆಯಲ್ಲಿ, ಸಂವಿಧಾನದ ಸಹಾಯದಲ್ಲಿ ನನಗೆ ದಕ್ಕಿದೆ. ಇವುಗಳಲ್ಲಿ ವೈಯಕ್ತಿಕವಾಗಿ ಸಂವಿಧಾನ ನನಗೆ ಬಹಳ ಸಹಾಯ ಮಾಡಿರುವುದು ಮತ್ತೊಂದು ವಿಷಯದಲ್ಲಿ. ಶಿಕ್ಷಣ ಪಡೆದರೆ, ಸರ್ಟಿಫಿಕೇಟ್ ಸಿಗುತ್ತದೆ, ಅದರಿಂದಾಗಿ ಕೆಲಸ, ಸಂಬಳ ಪಡೆಯಬಹುದು ಮತ್ತು ಒಂದು ಬದುಕನ್ನು ಕಟ್ಟಿಕೊಳ್ಳಬಹುದು. ಈ ಆಲೋಚನೆಯನ್ನೂ ದಾಟಿ – ವಿದ್ಯೆಯೆಂಬುದು ಸಿಲಬಸ್ ಮಾತ್ರವಲ್ಲ, ಬದುಕಿನಲ್ಲಿ, ಸಮಾಜದಲ್ಲಿ, ಕಲೆಯ ಮೂಲಕ, ಸಾಹಿತ್ಯದ ಮೂಲಕ ನನ್ನ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಿದೆ ಎಂದು ನನ್ನದೇ ಪಠ್ಯಗಳನ್ನು ಆಯ್ಕೆ ಮಾಡಿಕೊಂಡೆ. ಅಂದರೆ ರಂಗಭೂಮಿ, ಸಾಹಿತ್ಯ, ಸಂಗೀತ ಇವುಗಳಲ್ಲೂ ಬದುಕನ್ನು ಕಾಣಬಹುದು ಎಂಬ ಸ್ವತಂತ್ರ ಆಲೋಚನೆ ಬರುವ ಸಾಮಾಜಿಕ ಪರಿಸ್ಥಿತಿಯನ್ನೂ ಸಂವಿಧಾನವೇ ನಿರ್ಮಾಣ ಮಾಡಿರುವುದು. ಅಕಡೆಮಿಕ್ ಆಸರೆ ಪಡೆಯದೆಯೂ ಬೇರೆ ರೀತಿಯಲ್ಲಿಯೂ ನಾನು ಬದುಕಬಲ್ಲೆ ಎಂಬ ಧೈರ್ಯವನ್ನು ಒಂದು ಸಾಮಾಜಿಕ ಪರಿಸ್ಥಿತಿಯೇ ಕೊಡಬೇಕಾಗುತ್ತದೆ. ಅಂಥ ಪರಿಸ್ಥಿತಿಯನ್ನು ಸಂವಿಧಾನ ನನಗೆ ಕೊಟ್ಟಿದೆ ಎಂದು ಭಾವಿಸುತ್ತೇನೆ.